Reg. No. | | | | | | | | | | | | |

# BBAKALN 302

**III Semester B.B.A. Degree Examination, December 2023/January 2024**
**(NEP – 2020) (2023 – 24 Batch Onwards)**
**KANNADA**

ಸಮಯ : 2 ಗಂಟೆಗಳು | ಗರಿಷ್ಠಾಂಕಗಳು : 60

I. ಈ ಕೆಳಗಿನ **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ : **(2×8=16)**

1) ಮೂಲ ಸಂಸ್ಕೃತಿ ಪರಂಪರೆ ಮರೆಯಾಗುವ ನೋವನ್ನು 'ಬತ್ತಲಾರದ ಗಂಗೆ' ಕವನ ಹೇಗೆ ಅಭಿವ್ಯಕ್ತಿಸಿದೆ ? ವಿವರಿಸಿ.

2) ಬದಲಾಗುತ್ತಿರುವ ಮಾನವೀಯ ಸಂವೇದನೆಗಳು ಮತ್ತು ಮಾನವೀಯ ಸಂಘರ್ಷವನ್ನು 'ಯುಗಾದಿ' ಕಥೆಯ ಮೂಲಕ ವಿವರಿಸಿ.

3) ಸೋಮೇಶ್ವರ ಶತಕದಲ್ಲಿ ಪ್ರತಿಪಾದಿತವಾದ ನೀತಿ ಬೋಧನೆಯನ್ನು ವಿವರಿಸಿ.

4) 'ಅಮ್ಮ ಹೇಳಿದ ಎಂಟು ಸುಳ್ಳುಗಳು' ಪ್ರಸಂಗದಲ್ಲಿ ಅಭಿವ್ಯಕ್ತಗೊಂಡ 'ಅಮ್ಮನ' ವ್ಯಕ್ತಿತ್ವವನ್ನು ಬರೆಯಿರಿ.

II. ಈ ಕೆಳಗಿನ **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ : **(2×6=12)**

1) 'ಒಡವೆ ಹೋಯಿತು ಮನದೃಢವಾಯಿತು' ಕೀರ್ತನೆಯಲ್ಲಿ ಕನಕದಾಸರು ಹೇಳುವ ಆತ್ಮಸಾಕ್ಷಾತ್ಕಾರಕ್ಕಾಗಿ ಕಳೆದುಕೊಳ್ಳಬೇಕಾದ ಒಡವೆಗಳು ಯಾವುವು ? ವಿವರಿಸಿ.

2) ರಂಗವಲ್ಲಿ ಕವನದ ಆಶಯವನ್ನು ಬರೆಯಿರಿ.

3) 'ಬಳೆಗಾರನ ಹಾಡು' ಕವನದಲ್ಲಿ ಕಂಡುಬರುವ ಪ್ರೇಮದ ಪರಿಕಲ್ಪನೆಯನ್ನು ಬರೆಯಿರಿ.

4) ಉದ್ದಾಲಕ ಹಾಗೂ ಚಂಡಿಯ ಸಂಸಾರದ ಚಿತ್ರಣವನ್ನು ಲಕ್ಷ್ಮೀಶ ಕವಿಯು ಹೇಗೆ ಚಿತ್ರಿಸಿದ್ದಾನೆ ? ವಿವರಿಸಿ.

III. ಒಂದಕ್ಕೆ ಭಾವ ಸ್ವಾರಸ್ಯ ಬರೆಯಿರಿ : (1×4=4)

1) ಎಲುಬು ಮಾಂಸವನು ತುಂಬಿಟ್ಟುಕೊಂಡು
ನನ್ನ ಕುಲ ಹೆಚ್ಚು, ನಿನ್ನ ಕುಲ ಕಡಿಮೆ ಎಂದು
ಹೊಡೆದಾಡುವಂತಹ ಅಣ್ಣಗಳನ್ನು ಹಿಡಿತಂದು
ಮೂಗನೆ ಸವರಿ ಮೆಣಸಿನ ಹಿಟ್ಟು ತುಪ್ಪವ ತುಂಬಿ
ನಮ್ಮ ಪಡಿಹಾರಿ ಉತ್ತಣ್ಣನ ಎಡದ ಪಾದುಕೆಯಿಂದ
ಪಥಪಥನೆ ಹೊಡೆ ಎಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

ಅಥವಾ

2) ಉಡುರಾಜಂ ಕಳೆಗುಂದಿ ಪೆರ್ಚದಿಹನೇ ನ್ಯಗ್ರೋಧ ಬೀಜಂ ಕೆಲಂ
ಸಿಡಿದು ಪೆರ್ಮರನಾಗದೇ ಎಳೆಗರುಂ ಎತ್ತಾಗದೇ ಲೋಕದೊಳ್
ಮಿಡಿ ಪಣ್ಣಾಗದೆ ದೈವದೊಲ್ಮೆಯಿರಲಾ ಕಾಲಾನುಕಾಲಕ್ಕೆ ತಾಂ
ಬಡವಂ ಬಲ್ಲಿದನಾಗನೇ ಹರಹರಾ ಶ್ರೀ ಚೆನ್ನಸೋಮೇಶ್ವರಾ ।

IV. ಮೂರು ಸಾಲುಗಳಿಗೆ ಸಂದರ್ಭ ಸ್ವಾರಸ್ಯ ಬರೆಯಿರಿ : (3×4=12)

1) ರಂಗಮಂದಿರ ಅದೇ, ನಾಟಕವೂ ಅದೇ.
2) ಅಂಧಕನ ಕೈಯನಂದಕ ಹಿಡಿದೆಡೆ.
3) ಬೆಟ್ಟವೇರಿ ಹಸೆಯ ಬರೆವ ಭಕ್ತಿ ಎಂಥದ್ದು ?
4) ಗುಡಪಾನಂಗಳೊಳದ್ದೆ ಬೇವಿನ ಫಲ ಸ್ವಾದಪ್ಪುದೇ ?
5) ಮುಳ್ಳಿಡಿದ ಮರವೇರಿದಂತಾದುದು.

V. ಎರಡಕ್ಕೆ ಟಿಪ್ಪಣಿ ಬರೆಯಿರಿ : (2×4=8)

1) ಕೆ. ಪಿ. ಪೂರ್ಣಚಂದ್ರ ತೇಜಸ್ವಿ.
2) ಪು.ತಿ.ನ.
3) ಪುಲಿಗೆರೆಯ ಸೋಮನಾಥ.
4) ಲಕ್ಷ್ಮೀಶ.

VI. **ಒಂದು** ವಾಕ್ಯದಲ್ಲಿ ಉತ್ತರಿಸಿರಿ : (1×8=8)

1) ಎಂ. ಗೋಪಾಲಕೃಷ್ಣ ಅಡಿಗರ ಹುಟ್ಟೂರು ಯಾವುದು ?

2) 'ತಬರನ ಕಥೆ'ಯನ್ನು ಬರೆದ ಲೇಖಕರು ಯಾರು ?

3) 'ರಂಗವಲ್ಲಿ' ಕವನವನ್ನು ಯಾವ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ ?

4) 'ನಮ್ಮಮ್ಮ ಅಂದ್ರೆ ನಂಗಿಷ್ಟ' ಕೃತಿಯ ಲೇಖಕರು ಯಾರು ?

5) ಕನ್ನಡದ ಪ್ರೇಮಕವಿ ಎಂದು ಯಾರನ್ನು ಕರೆಯುತ್ತಾರೆ ?

6) ಸೋಮೇಶ್ವರ ಶತಕವನ್ನು ಸಂಪಾದಿಸಿದವರು ಯಾರು ?

7) ಲಕ್ಷ್ಮೀಶನ ಕೃತಿ ಯಾವುದು ?

8) 'ನೆನಪಾಗಿ ಕಾಡುತ್ತೆ ಆ ಒಂದು ರೈಲುಯಾನ' ಲೇಖನದ ಲೇಖಕರು ಯಾರು ?